ಇ) ಹೌದು.

ಈ) ಗಜೇಂದ್ರಗಡ, ನರೇಗಲ್ ಮತ್ತು ಮಾರ್ಗ ಮಧ್ಯದ ಹಳ್ಳಿಗಳ ನೀರು ಸರಬರಾಜು ಯೋಜನೆ ಪ್ರಗತಿಯಲ್ಲಿರುತ್ತದೆ. ಈ ಯೋಜನೆಯಡಿ ನೀರು ಸಂಗ್ರಹಣಾ ಕೆರೆ ಹೊರತುಪಡಿಸಿ ಬಾಕಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಒಳಗೊಂಡ ಕೆರೆಯಲ್ಲಿ (Impounding Reservoir) ರೋಣ ಪಟ್ಟಣದ ನೀರಿನ ಬೇಡಿಕೆಯನ್ನು ಪರಿಗಣಿಸಲು ಕೆರೆಯ ವಿನ್ಯಾಸವನ್ನು ಪರಿಷ್ಕರಿಸಿ, ರೋಣ ಪಟ್ಟಣಕ್ಕೆ ಸುಧಾರಿತ ನೀರು ಸರಬರಾಜು ಯೋಜನೆಯ ಅಂದಾಜು ಪಟ್ಟಿಯನ್ನು ₹ 4600.00 ಲಕ್ಷಗಳಿಗೆ ತಯಾರಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಉದ್ಭವಿಸುವುದಿಲ್ಲ.

ಕುಡಿಯುವ ನೀರಿನ ಯೋಜನೆಗೆ ಮೀಸಲಿರುವ ಅನುದಾನ

1155 (1577); ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ

ಅ) 2014–15 ನೇ ಸಾಲಿನ ಆಯವ್ಯಯದಲ್ಲಿ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಮೀಸಲಿರಿಸಿದ ಅನುದಾನವೆಷ್ಟು;

ಆ) ಈಗಾಗಲೇ ಎಷ್ಟು ಯೋಜನೆಗಳು ಕಾರ್ಯಗತವಾಗಿವೆ; ಎಷ್ಟು ಅನುದಾನ ಖರ್ಚಾಗಿದೆ;

ಇ) ಬಾಕಿ ಇರುವ ಯೋಜನೆಗಳಿಗೆ ಎಷ್ಟು ಅನುದಾನದ ಅವಶ್ಯಕತೆ ಇದೆ?

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) 2014–15 ನೇ ಸಾಲಿನ ಆಯವ್ಯಯದಲ್ಲಿ ಕರ್ನಾಟಕದ ಈ ಕೆಳಕಂಡ ಯೋಜನೆಗಳಿಗೆ ಒದಗಿಸಿದ ಒಟ್ಟಾರೆ ಮೊತ್ತದಲ್ಲಿ ನೀರು ಸರಬರಾಜಿನ ವ್ಯವಸ್ಥೆಗೆ ನಿಗದಿಪಡಿಸಿದ ಮೊತ್ತ:

ಎನ್.ಕೆ.ಯು.ಎಸ್.ಐ.ಪಿ. – ₹ 125.47 ಕೋಟಿಗಳು

ಕೆ.ಎಂ.ಆರ್.ಪಿ – ₹ 44.85 ಕೋಟಿಗಳು

16 ಪಟ್ಟಣಗಳು – ₹ 10.00 ಕೋಟಿಗಳು

ಆ) ನೀರು ಸರಬರಾಜು ವ್ಯವಸ್ಥೆ ಅನುಷ್ಠಾನಕ್ಕೆ 2014–15ನೇ ಸಾಲಿನಲ್ಲಿ ಈವರೆಗೆ ಆಗಿರುವ ವೆಚ್ಚ:

ಎನ್.ಕೆ.ಯು.ಎಸ್.ಐ.ಪಿ. – ₹ 109.47 ಕೋಟಿಗಳು

ಕೆ.ಎಂ.ಆರ್.ಪಿ – ₹ 15.22 ಕೋಟಿಗಳು

16 ಪಟ್ಟಣಗಳು – ನೀರು ಸರಬರಾಜು ವ್ಯವಸ್ಥೆ ಅನುಷ್ಠಾನಕ್ಕೆ ವಿಸ್ತೃತ ಯೋಜನಾ ವರದಿಗಳಿಗೆ (DPR) ತಾಂತ್ರಿಕ ಅನುಮೋದನೆ ಪಡೆಯುವ ಹಂತದಲ್ಲಿದ್ದು ಶೀಘ್ರವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು. ಇದುವರೆಗೂ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಇ) ನೀರು ಸರಬರಾಜು ವ್ಯವಸ್ಥೆ ಅನುಷ್ಠಾನಕ್ಕೆ 2014–15 ನೇ ಸಾಲಿನಲ್ಲಿ ಅನುದಾನದ ಅವಶ್ಯಕತೆ:

ಎನ್.ಕೆ.ಯು.ಎಸ್.ಐ.ಪಿ. – ₹ 67.80 ಕೋಟಿಗಳು

ಕೆ.ಎಂ.ಆರ್.ಪಿ – ₹ 29.63 ಕೋಟಿಗಳು

16 ಪಟ್ಟಣಗಳು – ಈ ಹಂತದಲ್ಲಿ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುವುದಿಲ್ಲ.

ಶಿಸ್ತು ಕ್ರಮ ಜರುಗಿಸುವುದು

1156 (1605); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

(ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪತ್ತೆಯಾಗಿದ್ದ ಅಕ್ರಮ ಗಣಿಗಾರಿಕೆಗಳ ಬಗ್ಗೆ ಹಿಂದಿನ ಲೋಕಾಯುಕ್ತರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಹೆಸರಿಸಲಾಗಿರುವ ಐ.ಎ.ಎಸ್., ಐ.ಪಿ.ಎಸ್. ಮತ್ತು ಐ.ಎಫ್.ಎಸ್., ಅಧಿಕಾರಿಗಳಾರು; (ಹೆಸರು ಸಮೇತ ವಿವರ ನೀಡುವುದು);